Sri K. SANGANGOWDA.—In view of the fact that a number of patients undergo operations daily and in some cases serious operations are done in that hospi al is it not the duty of the Government to see that the lift is put in order ?

Sri Y. RAMAKRISHNA.—There are two lifts under erection. I will see that they are completed as early as possible.

Sri B. B. SAYANAK.—Are the Government going to replace this old lift by a new one ?

Sri Y. RAMAKRISHNA.—I have already said that two lifts are under erection.

Secretaries and Deputy Secretaries working in Secretariat

55. Sri MAHADEV G. BANAKAR (Byadgi).—

Will the Chief Minister be pleased to state :—

(*a*) the number of Secretaries and Deputy Secretaries to Government working in the Mysore Government Secretariat as on 1st January 1969 ;

(*b*) how many are from New Mysore area and how many are from Old Mysore area ?

Sri VEERENDRA PATIL (Chief Minister).—

(*a*) 48.

(*b*) (i) New Mysore Area : 20

(ii) Old Mysore Area : 24

The rest are from the areas outside the New Mysore area.

ಶ್ರೀ ಮಹದೇವ ಜಿ. ಬಣಕಾರ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಹೊಸ ಮೈಸೂರು ಪ್ರದೇಶದವರು 20, ಹಳೇ ಮೈಸೂರು ಪ್ರದೇಶದವರು 24 ಇತರರು ಹೊಸ ಮೈಸೂರು ಪ್ರದೇಶದ ಹೊರಗಿನವರು ಎಂದು ಹೇಳಿದ್ದೀರಿ. ಇತರರು ಹೊಸ ಮೈಸೂರು ಪ್ರದೇಶದ ಹೊರಗಿನವರು ಎಂದರೆ ಅವರು ಹಳೆಯ ಮೈಸೂರಿನವರೇ ಅಥವಾ ಹೊಸ ಮೈಸೂರಿನವರೇ ?

†ಶ್ರೀ ವೀರೇಂದ್ರ ಪಾಟೀಲ್.—ಅವರು ಹೊಸ ಮೈಸೂರಿನವರೂ ಅಲ್ಲ, ಹಳೆಯ ಮೈಸೂರಿನವರೂ ಅಲ್ಲ, ಹೊರಗಡೆಯಿಂದ ಬಂದಿರುವವರು. ಐ. ಎ. ಎಸ್. ರೆಕ್ರೂಟ್‌ಮೆಂಟ್‌ನಲ್ಲಿ ನಮ್ಮ ರಾಜ್ಯಕ್ಕೆ ಇಷ್ಟು ಎಂದು ಕೋಟಾ ಅಲಾಟ್ ಮಾಡುತ್ತಾರೆ. ಈ ಅಲಾಟ್‌ಮೆಂಟ್ ಪ್ರಕಾರ ಹೊರ ರಾಜ್ಯದ ನಾಲ್ಕರು ಅಧಿಕಾರಿಗಳು ಸಚಿವಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಮಹದೇವ ಜಿ. ಬಣಕಾರ್.—ಹೊಸ ಮೈಸೂರು ಪ್ರದೇಶದ ಹೊರಗಿನವರು ಎಂದು ಉತ್ತರದಲ್ಲಿ ಹೇಳಿದ್ದೀರಲ್ಲ ಇವರು ಯಾವ ಭಾಗಕ್ಕೆ ಸೇರಿದವರು ?

ಶ್ರೀ ವೀರೇಂದ್ರ ಪಾಟೀಲ್.—ಔಟ್‌ಸೈಡ್ ಸ್ಟೇಟ್ ಅಫ್ ಮೈಸೂರು ಎಂದರೆ ಹೊರಗಡೆ ದೇಶದವರು ಎಂದರ್ಥ ಇವರು ಮೈಸೂರು ರಾಜ್ಯದವರಲ್ಲ.

ಶ್ರೀ ಎಂ. ಶೆಚ್. ಜಯಪ್ರಕಾಶ ನಾರಾಯಣ.—ಸೆಕ್ರೆಟರಿಗಳು ಹಾಗೂ ಡೆಪ್ಯುಟೀ ಸೆಕ್ರೆಟರಿಗಳು ಒಟ್ಟು 48 ಜನ ಎಂದು ಹೇಳಿರುವುದರಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಟ್ರೈಬ್ಸ್ ಪಂಗಡಕ್ಕೆ ಸೇರಿದವರು ಇದ್ದಾರೆ ? ಮತ್ತು ಕಚ್ಚು ಸಂಖ್ಯೆಯಲ್ಲಿ ಇಂತಹ ಹುದ್ದೆಗಳಿಗೆ ನೇಮಿಸದೇ ಇರಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಒಟ್ಟು ಪಟ್ಟಿಯನ್ನು ಕೇಳಿದರು. ಅದರಂತೆ ಕೊಡಲಾಗಿದೆ. ಕೆಲವು ಕಡೆ ಷೆಡ್ಯೂಲ್ಡ್ ಕ್ಯಾಸ್ಟ್ ಪಂಗಡದವರೂ ಇದ್ದಾರೆ. ಉದಾಹರಣೆ ಹೇಳಬೇಕಾದರೆ ಶ್ರೀಮಾನ್ ಭರಣಯ್ಯ ಎನ್ನುವರು ಬಹಳ ದಿವಸಗಳ ಕಾಲ ಪಂಚಾಯತಿ ರಾಜ್ಯ ಹಾಗೂ ಸಹಕಾರ ಖಾತೆಯ ಕಾರ್ಯದರ್ಶಿಗಳಾಗಿದ್ದರು. ಇತ್ತೀಚೆಗೆ ಅವರು ಪಬ್ಲಿಕ್ ಸರ್ವಿಸ್ ಕಮಿಷನ್ ಮೆಂಬರಾಗಿ ನೇಮಕವಾದರು.

ಶ್ರೀ ಹೆಚ್. ಬಿ. ಜ್ವಾಲನಯ.—ಕಾರ್ಯದರ್ಶಿಗಳು ಹಾಗೂ ಉಪಕಾರ್ಯದರ್ಶಿಗಳನ್ನು ನೇಮಕ ಮಾಡುವಾಗ ಸರಕಾರದವರು ಅನುಸರಿಸುತ್ತಿರುವ ನೀತಿಯೇನು ?

ಶ್ರೀ ವೀರೇಂದ್ರ ಪಾಟೀಲ್.—ರೆಕ್ರೂಟುಮೆಂಟು ರೂಲ್ಸ್ ಪ್ರಕಾರ ಕಾರ್ಯದರ್ಶಿಗಳನ್ನು ಹಾಗೂ ಉಪಕಾರ್ಯದರ್ಶಿಗಳನ್ನು ನೇಮಕ ಮಾಡಲಾಗುತ್ತದೆ.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ನಾಲ್ಕು ಜನ ಮೈಸೂರು ದೇಶದ ಹೊರಗಿನವರು ಎಂದರೆ ಇವರು ಹೈದರಾಬಾದು ಕರ್ನಾಟಕ ಭಾಗಕ್ಕೆ ಸೇರಿದವರೂ ಅಲ್ಲ ಮತ್ತು ಬಾಂಬೆ ಕರ್ನಾಟಕಕ್ಕೆ ಸೇರಿದವರೂ ಅಲ್ಲ ಎಂದು ಅರ್ಥವೆ ? ಮತ್ತು ಹೊಸಮೈಸೂರು ಪ್ರದೇಶದಲ್ಲಿ 20 ಜನ ಎಂದು ಹೇಳಿದ್ದೀರಿ. ಇದರಲ್ಲಿ ಹೈದರಾಬಾದು ಭಾಗಕ್ಕೆ ಸೇರಿದವರು ಎಷ್ಟು ? ಮತ್ತು ಬೊಂಬಾಯಿ ಭಾಗಕ್ಕೆ ಸೇರಿದವರು ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್.—20 ಜನರಲ್ಲಿ ಇಬ್ಬರು ಹೊರಗಡೆಗೆ ವರ್ಗವಾಗಿ ಹೋಗಿದ್ದಾರೆ. ಇನ್ನುಳಿದ 18 ಜನರಲ್ಲಿ 13 ಜನ ಹಳೇ ಮೈಸೂರು ಭಾಗಕ್ಕೆ ಸೇರಿದವರು, ಮೂರು ಜನ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದವರು ಒಬ್ಬರು, ಬಾಂಬೆ ಕರ್ನಾಟಕಕ್ಕೆ ಸೇರಿದವರು ಮತ್ತು ಒಬ್ಬರು ಹೊರಗಿನವರು ಇದ್ದಾರೆ.

ಶ್ರೀ ಎಸ್. ಎಸ್. ಅರಕೇರಿ.—ಐ. ಎ. ಎಸ್. ಕೇಡರಿಗೆ ಹೊರಗಿನಿಂದ ಬರುತ್ತಾರೆಂದು ಹೇಳಿದಿರಿ. ಮೈಸೂರು ರಾಜ್ಯದವರ ಕೋಟಾ ಈ ಐ. ಎ. ಎಸ್. ಕೇಡರಿನಲ್ಲಿ ಎಷ್ಟುಇತ್ತು ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿರುವ ಪ್ರಶ್ನೆಯಂತೆ ಒಟ್ಟು ವಿವರಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಪ್ರತ್ಯೇಕವಾದ ಒಂದು ಪ್ರಶ್ನೆ ಕೇಳಿದರೆ ಆಗ ನಮ್ಮ ರಾಜ್ಯದವರು ಕೋಟಾ ಎಷ್ಟು ಎನ್ನುವ ವಿವರಗಳನ್ನೆಲ್ಲಾ ಕೊಡಬಹುದು.

ಶ್ರೀ ಬಿ. ಪಿ. ಗಂಗಾಧರ್.—ಕಾರ್ಯದರ್ಶಿಗಳು ಹಾಗೂ ಉಪ ಕಾರ್ಯದರ್ಶಿಗಳನ್ನು ನೇಮಕ ಮಾಡುವಾಗ ಅವರಲ್ಲಿರುವ ಕಾರ್ಯದಕ್ಷತೆ, ಸರಕಾರದವರಲ್ಲಿ ಇರುವ ನಂಬಿಕೆ ಇತ್ಯಾದಿಗಳನೆಲ್ಲಾ ಗಮನಿಸಿ ನೋಡುತ್ತಾರೆಯೇ ? ಇಲ್ಲವೆ ಆಯಾ ಭಾಗಕ್ಕೆ ಸೇರಿದವರು ಎಂದು ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸರಕಾರ ಆ ರೀತಿಯಿಂದ ಪ್ರತಿಯೊಂದು ಕಡೆ ಸೆಕ್ರೆಟರಿಗಳನ್ನು ನೇಮಿಸುವಾಗ ಹಳೇ ಮೈಸೂರಿನವರು ಅಥವಾ ಹೊಸ ಮೈಸೂರಿನವರು ಎಂದು ನೋಡುವುದಕ್ಕಾಗುವುದಿಲ್ಲ. ಇವರ ಸರ್ವಿಸ್ ಏನು, ಎಕ್ಸ್‌ಪೀರಿಯನ್ಸ್ ಏನು ಇವರ ಕ್ಯಾಲಿಫಿಕೇಷನ್‌ಗಳೇನು ಇವನೆಲ್ಲಾ ನೋಡಿಕೊಂಡು ಅನಂತರ ನೇಮಕಗಳನ್ನು ಮಾಡುತ್ತಾರೆ. ಮೊದಲಿಗೆ ಸೆಕ್ಷನ್ ಆಫೀಸರಾಗಿ ಕೆಲಸ ಮಾಡಿರುವವರು ಅನಂತರ ಅಂಡರ್ ಸೆಕ್ರೆಟರಿಗಳಾಗಿ ನೇಮಕವಾಗುತ್ತಾರೆ, ಅಂಡರ್ ಸೆಕ್ರೆಟರಿಗಳಾಗಿರುವರು ಮುಂದೆ ಡೆಪ್ಯುಟಿ ಸೆಕ್ರೆಟರಿಗಳಾಗಿ ಪ್ರಮೋಷನ್‌ಮೇಲೆ ನೇಮಕವಾಗುತ್ತಾರೆ. ಆನಂತರ ಡೆಪ್ಯುಟಿ ಸೆಕ್ರೆಟರಿಗಳಾಗಿರುವವರು ಸೆಕ್ರೆಟರಿಗಳಾಗಿ ನೇಮಕವಾಗುತ್ತಾರೆ.